Protection of SC/ST people from Unsociable Practice

141 Sri K. SIDDAIAH (Santhemarahally).—

Will the Minister for Rural Development and Social Welfare be pleased to state:—

(*a*) wether any instances where people belonging to Scheduled Castes and Scheduled Tribes are generally exploited in the matter of bonded labour, indebtedness and social boycott have been brought to the notice of Government ;

(*b*) if so, whether any legislative measures are taken to put an end to this unsociable practice and protect them from such exploitation ?

Sri N. RACHAIAH (Minister for Rural Development and Social Welfare)—

(*a*) Yes.

(*b*) Under consideration.

ಶ್ರೀ ಕೆ. ಸಿದ್ದಯ್ಯ.—ಸಾಮಾಜಿಕ ಬಹಿಷ್ಕಾರ ಹಾಕಿದಾಗ ತಾವು ಹೇಳಿದ ರೀತಿಯಲ್ಲಿ ನಡೆಯದಿದ್ದರೆ ಕೂಲಿ ವಗೈರೆ ಬಹಿಷ್ಕಾರ ಹಾಕಿದವರು ಕೊಡುವುದಿಲ್ಲ, ಕೂಲಿ ಕೆಲಸಕ್ಕೆ ತೆಗೆದು ಕೊಳ್ಳುವುದಿಲ್ಲ. ಕೂಲಿಗಾಗಿ ಅವರನ್ನೇ ನಂಬಿಕೊಂಡಿರಬೇಕಾದ ಪರಿಸ್ಥಿತಿಯಿರುವುದರಿಂದ ಅನುಸೂಚಿತ ಜಾತಿಯವರು ಹೆದರಿ ದಣಿಗಳು ಹೇಳಿದಂತೆ ಕೇಳಿಕೊಂಡು ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ಸೂಕ್ತ ಪರಿಹಾರ ಒದಗಿಸಲು ಸರಕಾರ ಗಮನಕೊಡುವುದೇ ?

ಶ್ರೀ ಎನ್. ರಾಚಯ್ಯ.—ಅಂಥ ಸಂದರ್ಭದಲ್ಲಿ ಸೂಕ್ತ ಪರಿಹಾರ ಒದಗಿಸಲು ಸರಕಾರ ಯೋಚನೆಮಾಡುವುದು.

ಶ್ರೀ ಎಂ. ಎಸ್. ಕೃಷ್ಣನ್.—ಶೋಷಣೆ ತಪ್ಪಿಸಲು ಶಾಸನಕ್ರಮ ಕೈಕೊಳ್ಳುವುದು ಪರಿಶೀಲನೆಯಲ್ಲಿರುವುದಾಗಿ ಉತ್ತರ ಕೊಡಲಾಗಿದೆ. ಅದರ ರೂಪರೇಷೆಯೇನು ? ಇರುವ ಶಾಸನಗಳನ್ನೇ ಸರಿಯಾಗಿ ಜಾರಿಗೆ ತರುತ್ತಿಲ್ಲ. ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ವಿಧಿಸಲು ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಿಗೆ ಗೊತ್ತಿರುವಹಾಗೆ ರಾಜ್ಯಾಂಗದ ಪ್ರಕಾರ ಜೀತ ಪದ್ಧತಿ ಮುಂತಾದಕ್ಕೆ ಅವಕಾಶವಿಲ್ಲ. ಅದಕ್ಕೆ ಪ್ರತಿಬಂಧಕ ಹಾಕಲಾಗಿದೆ. ಕೇಂದ್ರ ಸರಕಾರ ಇದರ ಬಗ್ಗೆ ಕಾನೂನು ಮಾಡಿಲ್ಲ. ಮಾಡಬೇಕೆಂದು ಒತ್ತಾಯಮಾಡುತ್ತಿದ್ದೇವೆ. ಮತ್ತು ಬೇರೆ ರಾಜ್ಯಗಳಲ್ಲಿ ಇದರ ಬಗ್ಗೆ ಕಾನೂನು ಮಾಡಿರುವುದಾಗಿ ತಿಳಿದುಬಂದಿದೆ. ಹಾಗೆ ಮಾಡಿದ್ದರೆ ಅದರಂತೆ ನಾವೂ ಮಾಡಿ ಸೂಕ್ತ ರಕ್ಷಣೆ ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾವಂಸ್ವಾಮಿ.—ಅನೇಕ ಕಡೆ ಸೋಷಿಯಲ್ ಬಾಯ್ಕಾಟ್ ಆಗಿ ಊರನ್ನೇ ಬಿಡಬೇಕಾದ ಪರಿಸ್ಥಿತಿಯಿದೆ. ಈ ಸಂದರ್ಭದಲ್ಲಿ ರಿಲೀಫ್ ಎಲ್ಲಿ ಎಷ್ಟು ಕೊಡಲಾಗಿದೆ?

ಶ್ರೀ ಎನ್. ರಾಚಯ್ಯ.—ಜೀತಪದ್ಧತಿ ಮುಂತಾದ್ದು ಸಾಮ್ಯಾವಾಗಿ ಕೆಲವು ಊರುಗಳಲ್ಲಿ ಮಾತ್ರ ಇದೆ. ರಾಜ್ಯದ ಎಲ್ಲಾ ಕಡೆ ಇಲ್ಲ. ನಾನು ಪ್ರವಾಸ ಮಾಡಿದಾಗ ವಿಚಾರಿಸಿದ್ದೇನೆ. ಕೆಲವು ಕಡೆ ಇದ್ದರೆ ಹರಿಜನರಿಗೆ ತೊಂದರೆಯಿರುವುದನ್ನು ನಿವಾರಣೆಮಾಡಲು ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.